ದಿಃ 01-03-2023 ರಂದು ಪ್ರಾಸಾ 1 ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲು : ಆರೋಪಿತರ ಪರ ಶ್ರೀ ಎಸ್ ವೈ ಬಿ ವಕೀಲರಿಂದ

ನಾನು ಪದವಿ ಪಡೆದಿದ್ದೇನೆ. ನಮ್ಮ ಮನೆಯಲ್ಲಿ ನಮ್ಮ ತಾಯಿ ಕುಟುಂಬದ ಹಿರಿತನ ಮಾಡುತ್ತಾರೆ. ನಮ್ಮ ಅಕ್ಕ ಮತ್ತು ಆರೋಪಿಯ ಮದುವೆ ಎಲ್ಲಿ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ಹನುಮವ್ವ ಎನ್ನುವ ಹೆಂಡತಿ ಮತ್ತು ದೀಪಾ ಮತ್ತು ಬಾಳಪ್ಪ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ಹನುಮವ್ವನ ಮದುವೆಯಾದ ನಂತರ ಆರೋಪಿ ನಮ್ಮ ಅಕ್ಕನನ್ನು ಮದುವೆಯಾಗಿದ್ದಾರೆ ಎಂದರೆ ಸರಿ. ನಮ್ಮ ಅಕ್ಕ ಮತ್ತು ಆರೋಪಿ ಪ್ರೀತಿಸಿ ಓಡಿ ಹೋಗಿದ್ದು ಬೇವೂರು ಠಾಣೆಯಲ್ಲಿ ನ್ಯಾಯ ಪಂಚಾಯತಿ ಆದ ನಂತರ ಮದುವೆಯಾಗಿದೆ ಎಂದರೆ ಸರಿ. ನನ್ನ ಅಕ್ಕ ಮತ್ತು ಆರೋಪಿ ಯಡ್ಡೋಣಿ ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು, ಅದು ಯಾರ ಮನೆ ಎಂದು ಗೊತ್ತಿಲ್ಲ, ನಾನು ನನ್ನ ಅಕ್ಕನ ಬಾಡಿಗೆ ಮನೆಗೆ ಸುಮಾರು ಸಲ ಹೋಗಿದ್ದೆ. ಅವರಿಬ್ಬರೂ ಗಂಡ-ಹೆಂಡತಿ ಚೆನ್ನಾಗಿದ್ದರು. ನಾನು ಆಗ ಅವರು ಬಾಡಿಗೆಗೆ ಇದ್ದ ಮನೆಯ ಮಾಲೀಕರು ಯಾರು ಮತ್ತು ಸುತ್ತ ಮುತ್ತ ಮನೆಗಳಲ್ಲಿ ಯಾರಿದ್ದಾರೆ ಎಂದು ತಿಳಿದುಕೊಳ್ಳಲಿಲ್ಲ.

ಆರೋಪಿಯ ಮೊದಲನೇ ಹೆಂಡತಿ ಮತ್ತು ಮಕ್ಕಳು ಆತನ ಸ್ವಂತ ಮನೆಯಲ್ಲಿ ವಾಸವಿದ್ದಾರೆ ಎಂದರೆ ಗೊತ್ತಿಲ್ಲ. ಅವರಿಬ್ಬರೂ ಪ್ರೀತಿಸಿ ಮದುವೆಯಾದ ನಂತರ ನಮ್ಮ ಮನೆಗೆ ಬಂದು-ಹೋಗಿ ಮಾಡುತ್ತಿದ್ದಳು. ನಮ್ಮ ಊರು ಮತ್ತು ಆರೋಪಿಯ ಊರು ಬೇರೆ ಬೇರೆ. ಆರೋಪಿ ಜೆಸಿಬಿ ಡ್ರೈವರ. ಆರೋಪಿಯ ಹೊಲ ನೋಡಿದ್ದೇನೆ, ಅದರ ಸರ್ವೇ ನಂಬರ ಗೊತ್ತಿಲ್ಲ, ನಾನು ಆ ಹೊಲಕ್ಕೆ ಹೋಗಿದ್ದೆ, ಅದು ನೀರಾವರಿ ಜಮೀನು. ಅವರು ಹತ್ತಿ, ಟೋಮೆಟೋ ಬೆಳೆ ಬೆಳೆಯುತ್ತಾರೆ.

ನಮ್ಮ ಅಕ್ಕ ನಮ್ಮ ಮನೆಯಲ್ಲಿ ಆರೋಪಿ ಕಿರುಕುಳ ಕೊಡುತ್ತಿದ್ದ ಬಗ್ಗೆ ಹೇಳಿದ್ದಳು. ಆ ಬಗ್ಗೆ ಆರೋಪಿಯ ವಿರುದ್ಧ ಬೇವೂರು ಠಾಣೆಯಲ್ಲಿ ದೂರನ್ನು ಕೊಟ್ಟಿದ್ದೆವು. ನಾವು ಯಡ್ಡೋಣಿ ಗ್ರಾಮಕ್ಕೆ ಹೋಗಿ ಹಿರಿಯರನ್ನು ಕರೆಸಿ ಪಂಚಾಯತಿ ಮಾಡಿಲ್ಲ. ನಮ್ಮ ಅಜ್ಜ ಬಸಣ್ಣ, ಮಲ್ಲೇಶಪ್ಪ, ನೀಲಪ್ಪ ಅವರು ಬುದ್ದಿ ಹೇಳಿದ್ದರು. ದೂರು ಕೊಡುವ 3 ವರ್ಷಗಳ ಹಿಂದೆ ಬುದ್ದಿ ಹೇಳಿದ್ದರು. ನಮ್ಮ ತಾಯಿಗೆ ಶಸ್ತ್ರ ಚಿಕಿತ್ಸೆ ಆಗಿತ್ತು. ನಮ್ಮ ಅಕ್ಕನನ್ನು ಆರೋಪಿಯೇ ಕರೆದುಕೊಂಡು ಬಂದಿದ್ದ, ಆಗ ಅವರಿಬ್ಬರೂ ಚೆನ್ನಾಗಿದ್ದರು, ನಮ್ಮ ಅಕ್ಕ 3 ದಿನ ಅಲ್ಲಿದ್ದಳು. ದಿಃ 28-4-2021 ರಂದು

ನಾನೇ ನಮ್ಮ ಅಕ್ಕನನ್ನು ಆರೋಪಿಯ ಮನೆಯ ಹತ್ತಿರ ಬಿಟ್ಟು ಬಂದೆ. ಆಗ ಆರೋಪಿ ಮನೆಯಲ್ಲಿರಲಿಲ್ಲ. ರಮೇಶ ನಮ್ಮ ಊರಿನವ. ಆತನ ಫೋನ ನಂಬರ ಮೋಬೈಲನಲ್ಲಿ ಇದೆ. ನನ್ನ ಮೋಬೈಲ ನಂಃ 6363189154 ಆಗಿದೆ. ರಮೇಶ ನನಗೆ ಫೋನು ಮಾಡಿದಾಗ ನಾನು ನಮ್ಮ ತಾಯಿಯ ಜೊತೆ ಆಸ್ಪತ್ರೆಯಲ್ಲಿ ವಂಕಲಕುಂಟಾದಲ್ಲಿದ್ದೆ. ಸಹೋದರ ದೇವರಾಜ ಸಹಾ ಅಲ್ಲಿದ್ದ. ರಮೇಶ ಕುಂಟೋಜಿಯವರ ಹೊಲ ಯಡ್ಡೋಣಿ ಸೀಮಾದಲ್ಲಿ ಬರುವುದಿಲ್ಲ. ರಮೇಶಗೆ ಯಾರು ಸುದ್ದಿ ತಿಳಿಸಿದರು ಎಂದು ಗೊತ್ತಿಲ್ಲ.

ನಾನು ನಮ್ಮ ಅಕ್ಕನನ್ನು ಕುಷ್ಟಗಿ ಆಸ್ಪತ್ರೆಯಲ್ಲಿ ಹೋಗಿ ನೋಡಿದ್ದೆ. ನಾನೇ ಹೋಗಿದ್ದೆ. ನಮ್ಮ ಅಕ್ಕ ಮತ್ತು ಆಕೆಯ ಮಗನನ್ನು ಅಮರೇಶ ರೋಟ್ಟಿ ಎನ್ನುವವರು ಖಾಸಗಿ ವಾಹನದಲ್ಲಿ ಕುಷ್ಟಗಿ ಆಸ್ಪತ್ರೆಗೆ ದಾಖಲಿಸಿದ್ದರು, ಆ ವಾಹನ ಯಾವುದು ಎಂದು ಗೊತ್ತಿಲ್ಲ. ನಾನು ಕುಷ್ಟಗಿ ಆಸ್ಪತ್ರೆಗೆ ಹೋದಾಗ ರಾತ್ರಿ 7-30 ಗಂಟೆಯಾಗಿತ್ತು. ಆಗ ಅಲ್ಲಿ ಪ್ರಕಾಶ ಇದ್ದರು.

ನಮ್ಮ ಅಕ್ಕ ಮತ್ತು ಆಕೆಯ ಮಗ ವಿಷ ಸೇವನೆ ಮಾಡಿದಾಗ ಹೊಲದಲ್ಲಿ ಆರೋಪಿ ಇದ್ದನೋ ಇಲ್ಲವೋ ಗೊತ್ತಿಲ್ಲ. ಪ್ರಕಾಶ ಹೊಲದ ಪಕ್ಕ ಅವರ ಅಣ್ಣ ತಮ್ಮಂದಿರ ಹೊಲಗಳು ಇವೆ. ಮಂಜುನಾಥ, ಅಮರೇಶಪ್ಪ, ಹನುಮಂತಪ್ಪ ಅವರ ಹೊಲಗಳು ಇವೆ. ಆರೋಪಿಯ ನೀರಾವರಿ ಜಮೀನಿನ ಚೆಕ್ಕಬಂದಿ ಗೊತ್ತಿಲ್ಲ. ಆ ಹೊಲ ನೋಡಿದ್ದೇನೆ. ಆ ಹೊಲದಲ್ಲಿ ಮೊದಲು ಗುಡಿಸಲು ಇತ್ತು. ನಮ್ಮ ಅಕ್ಕ ನಮ್ಮ ತಾಯಿಯ ಜೊತೆ ಆಸ್ಪತ್ರೆಯಲ್ಲಿ ಏನು ಮಾತನಾಡಿದ್ದಳು ಎಂದು ಗೊತ್ತಿಲ್ಲ. ನಮ್ಮ ಅಕ್ಕ ಆ ದಿನ ಯಾವ ಕಾರಣಕ್ಕೆ ತೀರಿಕೊಂಡಳು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ದೂರನ್ನು ಮೊದಲೇ ತಯಾರಿಸಿಕೊಂಡು ಠಾಣೆಗೆ ಹೋದೆವು. ಮನೆಯಲ್ಲಿ ಎಲ್ಲರೂ ವಿಚಾರ ಮಾಡಿ ತಯಾರಿಸಿದೆವು. ದೂರನ್ನು ನಾನೇ ಬರೆದೆ, ದೂರನ್ನು ಮದ್ಯಾಹ್ನ 12 ಗಂಟೆಗೆ ಕೊಟ್ಟೆ. ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ.

ಈ ಪ್ರಕರಣದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ, ಅದೇ ದಿನ ಆರೋಪಿ ವಿಷ ಕುಡಿಸಿ ಹೊಡೆದಿದ್ದಾನೆಂದು ಮಾಹಿತಿ ಬಂತು, ಅದಕ್ಕೆ ಮೊದಲು ಒಂದೆರಡು ಬಾರಿ ಜಗಳ ಆಗಿದ್ದ ಬಗ್ಗೆ ಗೊತ್ತು. ನಾನು ನಮ್ಮ ಅಕ್ಕನನ್ನು ಬಿಟ್ಟು ಆ ದಿನ ವಾಪಸ್ ಊರಿಗೆ ಹೊರಟು ಹೋಗಿದ್ದೆ. ಆ ದಿನ ನನ್ನ ಮುಂದೆ ಯಾವುದೇ

ಜಗಳ ಆಗಲಿಲ್ಲ. ಆ ರೀತಿ ಜಗಳ ಆಗಿತ್ತು ಎಂದು ನಮ್ಮ ಮನೆಯಲ್ಲಿ ಎಲ್ಲರೂ ಹೇಳಿದ್ದರು. ನಾನು ದೂರಿನಲ್ಲಿ ಆ ದಿನ ಅವರಿಬ್ಬರ ನಡುವೆ ಜಗಳ ಆಗಿತ್ತು ಎಂದು ಬರೆದುಕೊಟ್ಟಿದ್ದೇನೆ. ನಮ್ಮ ಅಕ್ಕ ಮತ್ತು ಆರೋಪಿ ಪ್ರೀತಿ ಮಾಡಿ ಮದುವೆ ಮಾಡಿಕೊಂಡಿದ್ದು, ಇಬ್ಬರೂ ಅನ್ಯೂನ್ಯವಾಗಿದ್ದರು ಎಂದರೆ 07 ವರ್ಷಗಳ ಕಾಲ ಚೆನ್ನಾಗಿದ್ದು 3 ವರ್ಷಗಳಿಂದ ಜಗಳ ನಡೆಯುತ್ತಿತ್ತು. 3 ವರ್ಷಗಳಿಂದ ಆರೋಪಿ ನನ್ನಅಕ್ಕನ ನಡತೆ ಚೆನ್ನಾಗಿಲ್ಲ ನೀನು ಸತ್ತು ಹೋದರೆ ಬೇರೆ ಮದುವೆ ಮಾಡಿಕೊಳ್ಳುತ್ತೇನೆ ಎಂದು ಕಿರುಕುಳ ಕೊಡುತ್ತಿದ್ದ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ನಮ್ಮ ಅಕ್ಕ ಮನೆಗೆ ಬಂದಾಗ ಹೇಳಿದ್ದಕ್ಕೆ ನಾವು ಹಿರಿಯರು ಬುದ್ದಿ ಹೇಳಿ ಕಳಿಸಿದ್ದೆವು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ದಿಃ 26-4-2021 ರಂದು ನಮ್ಮ ತಾಯಿಯನ್ನು ನೋಡಲು ನಮ್ಮ ಅಕ್ಕ ವಂಕಲಕುಂಟಾ ಆಸ್ಪತ್ರೆಗೆ ಬಂದು 3 ದಿನ ಇದ್ದು ಆಕೆಯನ್ನು ನಾನೇ ಗಂಡನ ಮನೆಗೆ ಬಿಟ್ಟು ಬಂದಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ, ರಮೇಶ ನನಗೆ ಫೋನು ಮಾಡಿ ನಿಮ್ಮ ಅಕ್ಕ ಮತ್ತು ಆಕೆಯ ಮಗ ವಿಷ ಸೇವನೆ ಮಾಡಿ ಅವರನ್ನು ಆಸ್ಪತ್ರೆಗೆ ಸೇರಿಸಿದ್ದಾರೆಂದು ಹೇಳಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆಗ ನನ್ನ ತಮ್ಮ ದೇವರಾಜ ಆಸ್ಪತ್ರೆಗೆ ಹೋದ, ರಾತ್ರಿ 11-15 ಗಂಟೆಗೆ ನನ್ನ ಅಕ್ಕ ಮತ್ತು ಆಕೆಯ ಮಗ ಪ್ರಜ್ಞಾಹೀನರಾಗಿದ್ದಾರೆ ಎಂದು ಹೇಳಿದ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು ಆಸ್ಪತ್ರೆಗೆ ಹೋಗಿ ಅಮರೇಶನನ್ನು ವಿಚಾರಿಸಿದಾಗ ಯಡ್ಡೋಣಿ ಸೀಮಾದಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನ ಅಕ್ಕ ಮತ್ತು ಆಕೆಯ ಮಗ ವಿಷ ಕುಡಿದಿದ್ದಾರೆ ಎಂದು ತಿಳಿಯಿತು ಎಂದು ತಿಳಿಸಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಅಕ್ಕ ತೀರಿಕೊಳ್ಳುವ ಕಾಲಕ್ಕೆ ಹತ್ತಿ ಬೆಳೆ ಹಾಕಿದ್ದರು ಎಂದರೆ ಸರಿ. ನಮ್ಮ ಅಕ್ಕ ಹತ್ತಿ ಬೆಳೆಯಲ್ಲಿ ಕೆಲಸ ಮಾಡುತ್ತಿದ್ದು ಅದಕ್ಕೆ ಔಷಧಿ ಹೊಡೆದಿದ್ದು ಸರಿಯಾಗಿ ಕೈತೊಳೆಯದೇ ತಾನು ಊಟ ಮಾಡಿ ಮಗುವಿಗೂ ಊಟ ಮಾಡಿಸಿದ್ದರಿಂದ ಆಕಸ್ಮಿಕವಾಗಿ ಈ ಘಟನೆ ನಡೆದಿದೆ ಎಂದರೆ ಸರಿಯಲ್ಲ, ನಮ್ಮ ಅಕ್ಕನ ಮೊದಲನೇ ಮಗ ಪುರುಷೋತ್ತಮ ಆರೋಪಿಯ ಜೊತೆ ಇರುತ್ತಿದ್ದ ಎಂದರೆ ಸರಿ, ಆ ದಿನ ಆತ ಮನೆಯಲ್ಲಿದ್ದು ಹೊಲಕ್ಕೆ ಹೋಗಿರಲಿಲ್ಲ ಎಂದರೆ ಸರಿ. ನಮ್ಮಅಕ್ಕ ಆರೋಪಿಯನ್ನು ಪ್ರೀತಿಸಿ ಮದುವೆಯಾಗಿದ್ದರಿಂದ ನಮ್ಮ ಕುಟುಂಬದವರನ್ನು ದ್ವೇಷಿಸುತ್ತಿದ್ದೆವು ಎಂದರೆ

ಸರಿಯಲ್ಲ, ಮದುವೆಯಾದ ನಂತರ ನಮ್ಮ ಅಕ್ಕ ನಮ್ಮ ಊರಿಗೆ ಯಾವತ್ತೂ ಬಂದೇ ಇಲ್ಲ ಹಾಗೂ ನಾವು ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ, ಆರೋಪಿಯ ತಪ್ಪಿನಿಂದ ಅವರು ತೀರಿಕೊಂಡಿಲ್ಲ ಎಂದು ಗೊತ್ತಿದ್ದರೂ ಆರೋಪಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶ್ರೀಮತಿ ಬಿ ಎಸ್ ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ